## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.105/2024

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಗೀತಬಾಯಿ | CW: 2 | PW: 2 |
| ಗಂಡನ ಹೆಸರು | : | ಸುರೇಶ್ ನಾಯ್ಕ | | |
| ವಯಸ್ಸು | : | 35 | | |
| ವೃತ್ತಿ | : | ಕೂಲಿ | | |
| ವಾಸಸ್ಥಳ | : | ಹೊಸಜೋಗ | | |

ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಚಾಸಾ 1 ನನ್ನ ಗಂಡ. ಚಾಸಾ 3 ನನ್ನ ಮಾವ. ಚಾಸಾ 4 ಮತ್ತು 5 ರವರು ಗೊತ್ತು. 2 ವರ್ಷಗಳ ಹಿಂದೆ ಬೆಳಗ್ಗೆ 10 ಗಂಟೆಯಲ್ಲಿ ಬೇಲಿ ಹಾಕುವ ವಿಷಯದಲ್ಲಿ ಗಿರೀಶ್ ನಾಯ್ಕ ಚಾಸಾ 1 ರವರ ಮೇಲೆ ಜಗಳ ಮಾಡಿ, ಕಲ್ಲಿನಿಂದ ಚಾಸಾ 1 ರವರ ಮುಖಕ್ಕೆ ಹೊಡೆದು ಹಲ್ಲೆ ಮಾಡಿದ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು, ನನ್ನ ನೈಟಿ ಎಳೆದಾಡಿ ಹಲ್ಲೆ ಮಾಡಿದ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ದಿಃ 23.05.2023 ರಂದು ಬೆಳಗ್ಗೆ 9 ಗಂಟೆ ಸಮಯದಲ್ಲಿ ಚಾಸಾ 3 ರವರು ನನ್ನ ಮನೆಯ ಹಿತ್ತಲಿನಲ್ಲಿ ತಂತಿ ಬೇಲಿ ಹಾಕಲು ಹೋದಾಗ ಆರೋಪಿಯು ನನ್ನ ಮಾವನಿಗೆ ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿ, ಕೈಗಳಿಂದ ಚಾಸಾ 3 ರವರ ಮೈಕೈಗೆ ಹೊಡೆದು ಬಾಯಿಯಿಂದ ಎಡಗೈಗೆ ಕಚ್ಚಿ, ಕಲ್ಲಿನಿಂದ ಹೊಡೆದಿರುತ್ತಾನೆ ಎಂದರೆ ಸರಿ. ನಾನು, ಚಾಸಾ 1, 4 ಮತ್ತು 5 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಚಾಸಾ 1 ಮತ್ತು 3 ರವರು ಹಲ್ಲೆಯಿಂದ ನ್ಯಾಮತಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಜಿ ವಕೀಲರಿಂದಃ-</u>

ಆರೋಪಿ ನನಗೆ ಏನಾಗಬೇಕು ಎಂದರೆ ಪಕ್ಕದ ಮನೆಯವರು. ದೂರು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು, ಚಾಸಾ 1 ಮತ್ತು 3 ರವರು ಸೇರಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಬರೆದಿರುವ ವಿಚಾರ ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ದೂರನ್ನು ಯಾರು ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ದೂರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ತಂತಿ ಬೇಲಿ ವಿಚಾರದಲ್ಲಿ ಜಗಳ ಆಗಿರುತ್ತದೆ ಎಂದು ಹೇಳಿದ್ದು ಯಾವ ಜಾಗದಲ್ಲಿ ಯಾರು ತಂತಿ ಬೇಲಿ ಹಾಕುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ಆರೋಪಿಯು ತಂತಿ ಬೇಲಿ ಹಾಕಿದ್ದ ಎಂದು ನುಡಿಯುತ್ತಾರೆ. ಆರೋಪಿಯು ತಂತಿ ಬೇಲಿ ಹಾಕಿ ಎಷ್ಟು ವರ್ಷಗಳಾಗಿತ್ತು ಎಂದರೆ 2 ವರ್ಷ. ಯಾವ ದಿನಾಂಕದಂದು ಚಾಸಾ 3 ರವರು ತಂತಿ ಬೇಲಿ ಹಾಕಲು ಹೋಗಿದ್ದರು ಎಂದರೆ ಗೊತ್ತಿಲ್ಲ. ಯಾರ್ಯಾರು ತಂತಿ ಬೇಲಿ ಹಾಕಲು ಹೋಗಿದ್ದರು ಎಂದರೆ ಚಾಸಾ 1 ಮತ್ತು 3 ರವರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಎಲ್ಲಿದ್ದೆ ಎಂದರೆ ಮನೆಯ ಹೊರಗೆ ಎಂದು ನುಡಿಯುತ್ತಾರೆ ಮುಂದುವರೆದು ಸಾಕ್ಷಿಯು ಗಲಾಟೆ ಶಬ್ದ ಕೇಳಿ ಹಿತ್ತಲ ಕಡೆ ಹೋದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಕೃತ್ಯ ಸ್ಥಳದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ಸುಮಾರು 20 ಜನ ಎಂದು ನುಡಿಯುತ್ತಾರೆ. ಅವರ ಹೆಸರುಗಳು ಎಂದರೆ ಗೊತ್ತಿಲ್ಲ. ಯಾವ ಸಮಯದಿಂದ ಯಾವ ಸಮಯದವರೆಗೆ ಗಲಾಟೆ ಆಗಿರುತ್ತದೆ ಎಂದರೆ ಸಮಯ ಗೊತ್ತಿಲ್ಲ.

ಆರೋಪಿಯು ಹಾಕಿದ್ದ ತಂತಿ ಬೇಲಿಯನ್ನು ಚಾಸಾ 1 ಮತ್ತು 3 ರವರು ತೆಗೆಯಲು ಹೋಗಿ ಅವರೇ ಆರೋಪಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಹೊಡೆಯಲು ಹೋಗಿ ಚಾಸಾ 3 ರವರು ಕಾಲು ಜಾರಿ ಬಿದ್ದು ಮಾಡಿಕೊಂಡ ಗಾಯಕ್ಕೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ಕಲ್ಲಿನಿಂದ ಚಾಸಾ 3 ರವರಿಗೆ ಹೊಡೆದು, ಕೈಗಳಿಂದ ಚಾಸಾ 1 ಮತ್ತು 3 ರವರಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ನನಗೆ ಏನಾಗಬೇಕು ಎಂದರೆ ಪಕ್ಕದ ಮನೆಯವರು ಎಂದು ನುಡಿಯುತ್ತಾರೆ. ಮು.ಮಾಲುಗಳನ್ನು ಯಾರು ಎಲ್ಲಿಂದ ತೆಗೆದುಕೊಂಡು ಬಂದಿರುತ್ತಾರೆ ಎಂದರೆ ನೆನಪಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಯಾವಾಗ ಹೇಳಿಕೆ ನೀಡಿರುತ್ತೇನೆ ಎಂದರೆ ದಿನಾಂಕ ನೆನಪಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ಆರೋಪಿಯ ತಂತಿ ಬೇಲಿಯನ್ನು ತೆಗೆಸುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯು ತಂತಿ ಬೇಲಿ ಹಾಕಿದ್ದ ಎಂಬ ಜಾಗವು ಯಾರ ಹೆಸರಿಗೆ ಇದೆ ಎಂದರೆ ಚಾಸಾ 3. ಸದರಿ ಜಾಗದ ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದೀರಾ ಎಂದರೆ ಇಲ್ಲ. ಕೃತ್ಯ ಸ್ಥಳದ ಚೆಕ್ಕುಬಂಧಿ ಹೇಳಿ ಎಂದರೆ ಗೊತ್ತಿಲ್ಲ. ಆರೋಪಿಗೂ ಮು.ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ , ನೈಟಿ ಹಿಡಿದು ಎಳೆದಾಡಿಲ್ಲ, ಅವಮಾನಪಡಿಸಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊನ್ನಾಳಿ.